The Resource Centre

# Press Clipping


**Publication** : Kannada Prabha

**Date** : June 10, 2016

**Edition** : State

**Page** : 3, Chitraprabha





ನಟಿ ಭಾವನಾ ನಿರ್ಮಾಣದ 'ನಿರುತ್ತರ'ದ ಆಡಿಯೋ ಸೀಡಿ ಹೊರಬಂದಿದೆ. ಇದೇ ಮೊದಲ ಬಾರಿಗೆ 'ನಿರುತ್ತರ'ದ ಮೂಲಕ ಹೆಸರಾಂತ ಸಂಗೀತ ನಿರ್ದೇಶಕ ನೀಲಾದ್ರಿ ಕುಮಾರ್ ಕನ್ನಡಕ್ಕೆ ಎಂಟ್ರಿ ಆಗಿದ್ದಾರೆ. ಶಾಸ್ತ್ರೀಯ ಸಂಗೀತದಲ್ಲಿ ಇವರದ್ದು ದೊಡ್ಡ ಹೆಸರು. ಅದರಲ್ಲೂ ಕ್ಸಿಟಾರ್ ಹೆಸರಿನ ಸಿತಾರ್ ವಾದನದಲ್ಲಿ ಚಿರಪರಿಚಿತ. ಅದೇ ಸಂಗೀತ ಧಾಟಿಯೊಂದಿಗೆ ಅವರು 'ನಿರುತ್ತರ'ದಲ್ಲೂ ತಮ್ಮದೇ ಮಾಂತ್ರಿಕತೆ ತೋರಿರುವುದು ವಿಶೇಷ. ಎಂಟು ಹಾಡುಗಳಿರುವ ಈ ಚಿತ್ರದ ಆಡಿಯೋ ಸೀಡಿ ಪಕ್ಕಾ ಮಧುರ ಗೀತೆಗಳ ಆಲ್ಬಂನಂತಿದೆ. ಗೀತೆ ರಚನೆಕಾರ ಕವಿರಾಜ್ ಬರೆದಿರುವ ಹಾಡುಗಳಿಗೆ ಅರ್ಜುನ್ ನಾಯರ್, ಜೂನ್ ಬ್ಯಾನರ್ಜಿ, ಸಾವನಿ ಮುದಗಲ್, ಮೋಹನ್ ಜೋನಿತಾ ಗಾಂಧಿ, ಬಾಲಚಂದ್ರ ಪ್ರಭು ಮತ್ತು ಅಂಕಿತ ಧ್ವನಿಯಾಗಿದ್ದಾರೆ. ಇವರೆಲ್ಲರೂ ಚಿತ್ರರಂಗಕ್ಕೆ ಹೊಸಬರೆನ್ನುವುಗು ಮತ್ತೊಂದು ವಿಶೇಷ. ಸದ್ಯಕ್ಕೆ ಗಾಂಧಿನಗರದಲ್ಲಿರುವ ಟ್ರೆಂಡ್ ಅನ್ನು ಮೀರಿ ಇಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಹಾಗೆಯೇ ಕವಿರಾಜ್ ಸಾಹಿತ್ಯ ಕೂಡ ಸೊಗಸಾಗಿದೆ. ಮೆಲೋಡಿ ಹಾಡುಗಳು ಕೇಳುಗರಿಗೆ ಮೋಡಿ ಮಾಡುವಂತಿವೆ. ಇತ್ತೀಚೆಗೆ ನಡೆದ ಈ ಆಡಿಯೋ ಸೀಡಿ ಬಿಡುಗಡೆ ಸಮಾರಂಭಕ್ಕೆ ಚಿತ್ರರಂಗದ ಗಣ್ಯಾತಿಗಣ್ಯರೇ ಆಗಮಿಸಿದ್ದರು. ಹಿರಿಯ ನಟ ಹಾಗೂ ಸಚಿವ ರೆಬೆಲ್ ಸ್ಟಾರ್ ಅಂಬರೀಷ್, ಆಡಿಯೋ ಸೀಡಿ ಬಿಡುಗಡೆ ಗೊಳಿಸಿದರು. 'ಕನ್ನಡ ಚಿತ್ರರಂಗದ ಮಟ್ಟಿಗೆ ಕಲಾವಿದರೊಬ್ಬರು ಸಿನಿಮಾ ನಿರ್ಮಾಣಕ್ಕೆ ಮುಂದಾಗಿರುವುದು ಅಪರೂಪ. ನಟಿ ಭಾವನಾ ಆ ಸಾಹಸಕ್ಕೆ ಕೈಹಾಕಿದ್ದಾರೆ. ಅವರ ಕೆಲಸಕ್ಕೆ ಯಶಸ್ಸು ಸಿಗಲಿ' ಎಂದು ಅಂಬರೀಷ್ ಶುಭ ಹಾರೈಸಿದರು. ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿ, ನಟರಾದ ದರ್ಶನ್, ಆದಿತ್ಯ, ಯೋಗಿ, ಕನ್ನಡ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್‌ವಿ ರಾಜೇಂದ್ರಸಿಂಗ್ ಬಾಬು, ಜಯಲಕ್ಷ್ಮಿ ಸಿಂಗ್ ಸೇರಿದಂತೆ ಚಿತ್ರರಂಗದ ಗಣ್ಯರು ಉಪಸ್ಥಿತರಿದ್ದರು. ಅಪೂರ್ವ ಕಾಸರವಳ್ಳಿ ನಿರ್ದೇಶಿಸಿರುವ ಈ ಚಿತ್ರದಲ್ಲಿ ಕಿರಣ್ ಶ್ರೀನಿವಾಸ್, ಐಂದ್ರಿತಾ ರೇ, ಭಾವನಾ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಭಾವನಾ ಅವರ ಸಹೋದರ ಆನಂದ್ ರಾಮಣ್ಣ ಚಿತ್ರ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ. ಲಹರಿ ಸಂಸ್ಥೆ ಆಡಿಯೋ ಹಕ್ಕು ಪಡೆದಿದೆ. ಹತ್ವಾರ್ ಕತೆ ಬರೆದಿದ್ದು, ಆಸ್ಕರ್ ಪುರಸ್ಕೃತ ರೆಸುಲ್ ಪೂಕುಟ್ಟಿ ಚಿತ್ರಕ್ಕೆ ಧ್ವನಿ ಸಂಯೋಜನೆ ಮಾಡಿದ್ದಾರೆ. ಕೌಟುಂಬಿಕ ಸಂಬಂಧ ಎಳೆಗಳೊಂದಿಗೆ ಹೆಣೆದಿರುವ ಈ ಕತೆ ಕುತೂಹಲ ಮೂಡಿಸಿದ್ದು, ಶೀಘ್ರವೇ ತೆರೆಗೆ ಬರಲಿದೆ ಎನ್ನುತ್ತಿದೆ ಚಿತ್ರತಂಡ.